



(6ನೇ ಪುಟದಿಂದ)

ಹೆಚ್ಚಿನವರು ಇದನ್ನು ಕಪ್ಪು ಕಾಜಾಣವೆಂದು ಭಾವಿಸುತ್ತಾರೆ. ಆದರೆ ಇದು ಅದಕ್ಕಿಂತ ಭಿನ್ನವಾಗಿದೆ. ಕಪ್ಪು ಕಾಜಾಣ ಇರುವೆಡೆ ಇವು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಮುಖ್ಯವಾಗಿ ಕೀಟಗಳು, ಚಿಕ್ಕಪುಟ್ಟ ಹಣ್ಣುಗಳು ಮತ್ತು ಹೂವಿನ ಮಕರಂದ ಇದರ ಆಹಾರ. ಗಂಡು – ಹೆಣ್ಣುಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಯಾವಾಗಲೂ ಜೋಡಿಯಲರುತ್ತವೆ. ಕಾಡಿನಲ್ಲಿ ಕೀಟ ಶಿಕಾರಿ ಮಾಡುವ ಹಕ್ಕಿಗಳ ಗುಂಪಿನಲ್ಲಿ ಇದು ಪ್ರಧಾನ ಪಾತ್ರ ವಹಿಸುತ್ತದೆ. ದಪ್ಪನಾದ ಕೊಕ್ಕೆಯಂತಹ ಕೊಕ್ಕು, ಹವಳದ ಕಣ್ಣುಗಳು, ಉದ್ದವಾದ ರೆಕ್ಕೆಗಳು, ಬಲಿಷ್ಠವಾದ ಕಾಲುಗಳಲ್ಲಿ ಚೂಪಾದ ಕಾಲುಗುರುಗಳು ಮತ್ತು ಉದ್ದನಾದ ಸೀಳು ಬಾಲ– ಈ ಹಕ್ಕಿಯ ವಿಶೇಷತೆ. ಶಕ್ತಿಯುತ ಹಾರಾಟ ಮತ್ತು ಗಟ್ಟಿ ಗಂಟಲಿನ ಹಕ್ಕಿಯಿದು. ಇತರ ಹಕ್ಕಿಗಳ ಕೂಗನ್ನು ಅನುಕರಿಸುವುದರಲ್ಲಿ ನಿಪುಣ. ಮುಂಜಾನೆಯಲ್ಲೂ ಸಂಜೆಯಲ್ಲೂ ಹಾಡುವ ಕಾಜಾಣದ ಸಿಳ್ಳಿನ ರಾಗಾಲಾಪನೆ ಸುಪ್ರಸಿದ್ಧ.

ಕಾಜಾಣ ತುಂಬಾ ಶೀಘ್ರ ಕೋಪದ, ಧೈರ್ಯಶಾಲಿ ಹಕ್ಕಿ. ತಮ್ಮ ತಂಟೆಗೆ ಬಂದ ಯಾವುದೇ ಜೀವಿಯನ್ನು ಹೊಡೆದೋಡಿಸುವುದರಲ್ಲಿ ನಿಷ್ಣಾತ. ಆದ್ದರಿಂದ ಎಷ್ಟೋ ದುರ್ಬಲ ಹಕ್ಕಿಗಳು ಅದೇ ಮರದಲ್ಲಿ ಗೂಡನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತವೆ. ಇತರ ಹಕ್ಕಿಗಳು ಹಿಡಿದ ಬೇಟೆಯನ್ನು ಬೆದರಿಸಿ ದರೋಡೆ ಮಾಡುತ್ತವೆ. ಆದ್ದರಿಂದ 'ಪಕ್ಷಿಲೋಕದ ರೌಡಿ' ಎನ್ನುವ ಅನ್ವರ್ಥಕ ಹೆಸರೂ ಇದಕ್ಕಿದೆ.

ಕರ್ನಾಟಕದಲ್ಲಿ ಕಂಡು ಬರುವ ಕಾಜಾಣ ಗುಂಪಿನ ಇತರ ಪ್ರಭೇದಗಳೆಂದರೆ ಕಪ್ಪು ಕಾಜಾಣ, ಭೀಮರಾಜ ಅಥವಾ ತಂತಿ ಬಾಲದ ಕಾಜಾಣ, ತುರಾಯಿ ಕಾಜಾಣ, ಕಂಚು ಕಾಜಾಣ ಮತ್ತು ಬಿಳಿ ಹೊಟ್ಟೆಯ ಕಾಜಾಣ. ಸಾಕುವ ಪಕ್ಷಿಯಾಗಿಯೂ ಕಾಜಾಣ ಪ್ರಸಿದ್ಧವಾಗಿದೆ.

ಮಾರ್ಚ್ ನಿಂದ ಜೂನ್ ವರೆಗೂ ಎತ್ತರದ ಮರಗಳ ಕವಲುಗಳಲ್ಲಿ ಬೇರು, ನಾರು, ಹುಲ್ಲಿನಿಂದ ಬಟ್ಟಲು ಆಕಾರದ ಗೂಡು ಕಟ್ಟುತ್ತದೆ. ಕೆಂಪು ಮಿಶ್ರಿತ ಕಂದು ಚುಕ್ಕೆಯ, ಬಿಳಿ ಬಣ್ಣದ ಸುಮಾರು 3–4 ಮೊಟ್ಟೆಗಳನ್ನು ಇಡುತ್ತದೆ.